# ಪದಬಂಧ




**ಎಡದಿಂದ ಬಲಕ್ಕೆ**

1. ಆಸ್ತಿಗಾಗಿ ವಿವಾದ ನಡೆದಿದೆ ಎಂಬ ಸುದ್ದಿ ನೈಜವಲ್ಲ 3
3. ಕೊಡಚಾದ್ರಿಯಲ್ಲೂ ಹೇಗೆ ಇಷ್ಟೊಂದು ಕೊಳಕು, ಕಸ? 3
4. ಸಮ್ಮೇಳನಕ್ಕೆಂದು ಬಂದವರೊಡನೆ ಏಕಿಂಥ ಯುದ್ಧ? 3
6. ವಿನಂತಿ ಮಾಡಿದವರಿಗೆಲ್ಲ ನೀಡಲಾಯಿತು ಭಾರೀ ರಿಯಾಯ್ತಿ 4
7. ಬೆತ್ತ ಹಿಡಿದು ಕಲಿಸುತ್ತಿದ್ದದ್ದು ಮುಗಿದುಹೋದ ಸಮಯ 4
8. ಎಲ್ಲಕ್ಕೂ ಮುಂದೆ ನಿಲ್ಲುತ್ತಿದ್ದವನಿಗೆ ಈಗ ವೃದ್ಧಾಪ್ಯ 4
10. ತೇರಿನ ಹಿಂದೆ ಆತನ ತಮ್ಮಂದಿರೆಲ್ಲ ಸೇರಿ ಅದೇನು ಗುಟ್ಟು? 4
12. ಅಂಚೆ ತರುವವನ ಜೊತೆ ಇಂಥ ವರ್ತನೆ ಯೋಗ್ಯವಾದದ್ದಲ್ಲ 4
14. ಸಂಚು ಹೂಡಿದವರ ಕಾರ್ಯಗಳಿಗೆಲ್ಲ ವಿಪತ್ತು ಒದಗಿತ್ತು 4
16. ಅಕೃತ್ಯ ಮಾಡುವವರಿಂದ ಆಕೆಯ ಸುತ ದೂರವಾದ್ದು ಒಳ್ಳೆಯ ಕೆಲಸ 3
17. ಹಾಡುತ್ತ ಹಾಡುತ್ತಲೇ ಎಲ್ಲರ ಮೇಲೂ ಹತೋಟಿಯೇ? 3
18. ಆತನ ಸಂಪತ್ತೆಲ್ಲ ಹೆಚ್ಚು ಕಡಿಮೆ ಇಲ್ಲದಂತೆ ಸತ್ಕಾರ್ಯಗಳಿಗೆ ಒಪ್ಪಿಸಲ್ಪಟ್ಟಾಯಿತು 4

**ಮೇಲಿನಿಂದ ಕೆಳಕ್ಕೆ**

1. ಅಡ್ಡಾಡುವ ಪ್ರದೇಶ ಇದಲ್ಲ ; ಇದೊಂದು ಅರಣ್ಯ 3
2. ಪ್ರಸಿದ್ಧ ಉಸ್ತಾದರ ವಾಸದ ಮನೆ ಇದೇ 3
3. ಕರೀ ಕಲ್ಲಿನಲ್ಲಿ ವಿಗ್ರಹಗಳನ್ನು ಕೆತ್ತುವ ಕುಶಲ ವಿದ್ಯೆ ಕಲಿತವ 4
5. ದೂರ ಸರಿಸಿದಿರೇಕೆ? ಅದು ಶುಲ್ಕ ಸಲ್ಲಿಸಿದ ದಾಖಲೆ ಚೀಟಿ 3
7. ಸಂಭ್ರಮಿಸುತ್ತಿರುವಂತೆಯೇ ಪ್ರತ್ಯಕ್ಷಳಾದಳು ಪೃಥ್ವಿಯ ಮಗಳು ಸೀತೆ 4
9. ನಾವೆಯನ್ನು ನಡೆಸಿದಾತನಿಗೆ ನೀಡಿದ ಬಹುಮಾನ ಈ ಬೆಣ್ಣೆ 4
11. ಮೂರೆಣಿಸುವುದರೊಳಗೆ ಎದುರಾಳಿಯನ್ನು ಸೋಲಿಸು, ತಲೆಬಾಗುವಂತೆ ಮಾಡು 3
13. ಹತರಾಗಿದ್ದವರನ್ನು ಮರಳಿ ಬದುಕಿ ಬರುವಂತೆ ಮಾಡಿದ ರಾಮದೂತ 4
14. ಸತಾಯಿಸುತ್ತಿದ್ದವನು ದೂರವಾದದ್ದು ತಂದಿದೆ ಬಹಳ ಆನಂದ 3
15. ಹಿತವಾದ ಎಲ್ಲದರಿಂದಲೂ ಹೊರತಾದದ್ದು ...? 3

---

## 14–12–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅನೂಚಾನ 3. ವಾರಾಂತ್ಯ 4. ವ್ಯತ್ಯಾಸ 6. ಅನವಶ್ಯ 7. ಲಕ್ಷಜನ 9. ತರುವಾಯ 12. ಧನವಂತೆ 14. ಮುಸುಡಿ 15. ಕಾಯಕ 16. ಅನಿವಾರ್ಯ

**ಮೇಲಿನಿಂದ ಕೆಳಕ್ಕೆ**

1. ಅತ್ಯವಶ್ಯ 2. ನವ್ಯಕಾಲ 3. ವಾಚನ 5. ಸರೋಜ 6. ಅಸ್ತಂಗತ 8. ನಶ್ವರತೆ 10. ರುಸುಮು 11. ಯಪಾಡಿಅ (= ಅಡಿಪಾಯ ತಲೆಕೆಳಗು) 12. ಧರ್ಮಕಾರ್ಯ 13. ವಂಚಕ

ಪ್ರಶ್ನಾಂಕಣ

# ವಿಶ್ವದಾಖಲೆಯ ಐಸ್‌ಬರ್ಗ್ ಯಾವುದು?

**1986,** ಆಗಸ್ಟ್. ಆಗ ಅಂಟಾರ್ಕ್ಟಿಕಾ ಭೂಖಂಡದ ಪೂರ್ವದಂಚಿನಿಂದ ಬೃಹದ್ಗಾತ್ರದ ಒಂದು ಐಸ್‌ಬರ್ಗ್ (ಹಾಗೆಂದರೆ ಧ್ರುವ ಪ್ರದೇಶಗಳ ನೀರ್ಗಲ್ಲ ಸಾಮ್ರಾಜ್ಯಗಳಿಂದ ಮುರಿದು ಕಡಲಿಗೆ ಇಳಿದು ತೇಲತೊಡಗುವ ಗುಡ್ಡ ಬೆಟ್ಟಗಳ ಗಾತ್ರದ ಹಿಮದ ಬಂಡೆಗಳು) ಕಳಚಿ ಕಡಲಿಗಿಳಿಯಿತು. **A32a** ಎಂದು ಹೆಸರಿಸಲಾದ ಆ ಐಸ್‌ಬರ್ಗ್ ತಾನಿದ್ದ ವೆಡೆಲ್ ಸಮುದ್ರದಲ್ಲೇ ತಳ ಹಿಡಿದು ಕುಳಿತಿತ್ತು. ಅಲ್ಲಿನ ನಿರಂತರ ಬಿರುಗಾಳಿಯಾಗಲೀ, ಪ್ರಬಲ ಸಾಗರ ಪ್ರವಾಹಗಳಾಗಲೀ ಅದನ್ನು ಕದಲಿಸುವುದೂ ಅಸಾಧ್ಯವಾಗಿತ್ತು.

ಏಕೆಂದರೆ, **A32a** ಐಸ್‌ಬರ್ಗ್‌ನದು ಅಂತಹ ಉದ್ದ, ಅಗಲ, ಎತ್ತರ ಮತ್ತು ಗಾತ್ರ. ಅದರ ಉದ್ದ 46 ಕಿ.ಮೀ., ಅಗಲ 37 ಕಿ.ಮೀ., ಎತ್ತರ 43 ಮೀಟರ್. ಅದರ ತೂಕ ಒಂದು ಲಕ್ಷ ಕೋಟಿ ಟನ್! ಎಂದರೆ, ಪೂರ್ಣ ಕರಗಿದರೆ ಹತ್ತು ಕೋಟಿ ಕೋಟಿ ಲೀಟರ್ ನೀರು! ಹಾಗಾಗಿಯೇ **A32a** ಧರೆಯ ಈಗಿನ ಅತ್ಯಂತ ದೈತ್ಯ ಐಸ್‌ಬರ್ಗ್ ಎಂಬ ವಿಶ್ವ ದಾಖಲೆಯನ್ನು ಸೃಜಿಸಿದೆ.

ಪ್ರಸ್ತುತ ವಿಷಯ ಏನೆಂದರೆ, 37 ವರ್ಷಗಳಿಂದ ಕಡಲಿನ ತಳ ಹಿಡಿದು ನಿಶ್ಚಲವಾಗಿ ಉಳಿದಿದ್ದ ಈ ಐಸ್‌ಬರ್ಗ್ ಈಗ ತೇಲುತ್ತ ಚಲಿಸತೊಡಗಿದೆ.

ಉಪಗ್ರಹಗಳು ಪತ್ತೆ ಹಚ್ಚಿದ ಈ ಸುದ್ದಿಯನ್ನು ಇದೇ ಕಳೆದ ನವೆಂಬರ್ 24 ರಂದು ದಿ ಬ್ರಿಟಿಷ್ ಅಂಟಾರ್ಕ್ಟಿಕ್ ಸರ್ವೇ ಸಂಸ್ಥೆ ಟ್ವಿಟರ್ (ಎಕ್ಸ್) ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿತು. **A32a** ಐಸ್‌ಬರ್ಗ್‌ನ ಸಾಗರ ಪಯಣ ಯಾವುದೇ ಸದ್ದು ಗದ್ದಲ ಕೋಲಾಹಲಗಳಿಲ್ಲದೆ ತಂತಾನೇ ಆರಂಭವಾಯಿತು. **1986**ರಿಂದ ಈವರೆಗಿನ ಇಷ್ಟೂ ಕಾಲದಲ್ಲಿ ಅಲ್ಲಿ ಇಲ್ಲಿ ಅಷ್ಟಿಷ್ಟು ಕರಗಿ ಕಿಂಚಿತ್ ಆಕಾರ ಬದಲಾದೊಡನೆ **A32a** ನೆಲ ಬಿಟ್ಟು ತೇಲತೊಡಗಿದೆ.

ವಿಶ್ವದಾಖಲೆಯ ಒಂದು ಬೃಹತ್ ದ್ವೀಪದಂತಹ ಮಹಾಗಾತ್ರದ ಈ ಐಸ್‌ಬರ್ಗ್ ಈಗ ನಿಧಾನವಾಗಿ ಅಂಟಾರ್ಕ್ಟಿಕಾ ಖಂಡದಿಂದ ಪೂರ್ವದತ್ತ ದಕ್ಷಿಣ ಸಾಗರದಲ್ಲಿ ತೇಲುತ್ತ ಸಾಗುತ್ತಿದೆ. ಅದರ ವೇಗ ಒಂದು ದಿನಕ್ಕೆ ಮೂರು ಕಿಲೋಮೀಟರ್ ಆಗುವಷ್ಟಿದೆ. ಅಂಟಾರ್ಕ್ಟಿಕಾ ಸನಿಹದ ನಿರಂತರ ಬಿರುಗಾಳಿ ಮತ್ತು ಅಂಟಾರ್ಕ್ಟಿಕಾ ಸುತ್ತಲಿನ ಬಲಿಷ್ಠ ಸಾಗರ ಪ್ರವಾಹ ದಿ ಅಂಟಾರ್ಕ್ಟಿಕ್ ಸರ್ಕಂ ಪೋಲಾರ್ ಕರೆಂಟ್ ಈ ಐಸ್‌ಬರ್ಗ್ ಅನ್ನು ಮುಂದೆ ತಳ್ಳುತ್ತಿವೆ. ಇವೆರಡೂ ಶಕ್ತಿ ಮೂಲಗಳ ತಳ್ಳು ಬಲಕ್ಕನುಗುಣವಾಗಿ ತೇಲುತ್ತ, ಅಲ್ಲಲ್ಲೇ ನಿಲ್ಲುತ್ತ ಕಡೆಗೆ **A32a** ಸಂಪೂರ್ಣ ಕರಗುವ ವೇಳೆಗೆ ಇನ್ನು ಹಲವು ದಶಕಗಳೇ ಕಳೆದುಹೋಗಿರುತ್ತವೆ!



ಅಂಟಾರ್ಕ್ಟಿಕಾವನ್ನು ಪರಿವರಿಸಿರುವ ದಕ್ಷಿಣ ಸಾಗರದ ಪೋಷಕಾಂಶಭರಿತ ನೀರಿನಿಂದ ಮೈದಳೆದಿರುವ ಈ ಐಸ್‌ಬರ್ಗ್ ಕರಗಿದಂತೆಲ್ಲ ಅದರಲ್ಲಿ ಸಂಗ್ರಹವಾಗಿರುವ ಪೋಷಕಾಂಶಗಳು ಅದು ಚಲಿಸುವ ಹಾದಿಯುದ್ದಕ್ಕೂ ಕಡಲಿಗೆ ಬೆರೆಯಲಿವೆ; ಅಲ್ಲೆಲ್ಲ ಹರಡಿರುವ ಜೀವಜಾಲಕ್ಕೆ ಆಹಾರ ಒದಗಿಸಲಿವೆ.

■ **ಎನ್. ವಾಸುದೇವ್**